**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.**

**ದಿನಾಂಕ: 28-02-2026 ರಂದು ಹಮ್ಮಿಕೊಂಡಿದ್ದ**

# ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರದ

# ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಜಯನಗರದ ವಾಸನ್ ಐ ಕೇರ್ ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರದ ಕಾರ್ಯಕ್ರಮವನ್ನು ದಿನಾಂಕ: 28-02-2026 ರಂದು ಶನಿವಾರದ ಬೆಳಿಗ್ಗೆ 09-30 ಗಂಟೆಯಿಂದ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.





ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.







ಆರೋಗ್ಯ ತಪಾಸಣಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಮುಖ್ಯ ಅತಿಥಿಗಳಾದ ವಿಜಯನಗರ ಉಪ-ವಿಭಾಗದ ಸಹಾಯಕ ಪೊಲೀಸ್ ಆಯುಕ್ತರವರಾದ ಶ್ರೀ ಚಂದನ್ ಕುಮಾರ್‌ರವರು ಹಾಗೂ ವಾಸನ್ ಐ ಕೇರ್ ನ ಹಿರಿಯ ವೈದ್ಯಾಧಿಕಾರಿಗಳಾದ ಡಾ|| ಸೌಜನ್ಯ ಕೆ. ರವರೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ಹಿರಿಯ ಸದಸ್ಯರಾದ ಶ್ರೀ ಎಸ್.ಪಿ. ನಾಯಕ್, ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಬಿ.ಕೆ. ಶಿವರಾಮ್ ರವರು ಹಾಗೂ ನಿಕಟ ಪೂರ್ವ ಕಾರ್ಯದರ್ಶಿಯವರಾದ ಶ್ರೀ. ಕುಮಾರ ಎಸ್. ಕರನಿಂಗರವರು ಮತ್ತು ಸಂಘದ ಪದಾಧಿಕಾರಿಗಳೊಂದಿಗೆ ದೀಪ ಬೆಳಗಿಸುವ ಮೂಲಕ ಶಿಬಿರವನ್ನು ಉದ್ಘಾಟಿಸಲಾಯಿತು.





ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀಯುತ ಬಿ. ಕೆ. ಶಿವರಾಮ್ ರವರು, ಇಡೀ ಭಾರತದಲ್ಲೇ ಉತ್ತಮವಾದ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘವನ್ನು ಹೊಂದಿದ್ದೀವಿ. ಹಿಂದಿನ ಮೇಲಧಿಕಾರಿಗಳು ತುಂಬಾ ಸಹಕರಿಸಿದ್ದಾರೆ. ಈ ಹಿಂದೆ, ವಿಶೇಷವಾದಂಥಹ ಹಾಗೂ ಸಾಮಾಜಿಕ ಕಳಕಳಿಯ ಕೆಲಸ ಮಾಡಿದಂತಹ ನಮ್ಮ ಇಲಾಖೆಯ ಮಹಿಳಾ ಕಾನ್ಸ್ಟೇಬಲ್ ರವರನ್ನು ತಾಯಿ ಅಂತ ಪರಿಗಣಿಸುತ್ತೇನೆ. ಕಾರಣ, ಅನಾಥವಾಗಿ ಬಿಟ್ಟು ಹೋಗಿದ್ದ ಮಗುವನ್ನು ಹೊಯ್ಸಳ ಸಿಬ್ಬಂದಿ ಪತ್ತೆ ಮಾಡಿ ಚಿಕಿತ್ಸೆಗೆ ಒಳಪಡಿಸಿದಾಗ, ಪರೀಕ್ಷಿಸಿದ ವೈದ್ಯರು ಮಗುವಿನ ಆರೋಗ್ಯ ಚೆನ್ನಾಗಿದೆ. ಹಾಲುಣಿಸಬೇಕು ಅಂತ ಹೇಳಿದರು. ಆ ಮಾಹಿತಿಯನ್ನು ಕೇಳಿದಂತಹ ನಮ್ಮ ಮಹಿಳಾ ಸಿಬ್ಬಂದಿಯೊಬ್ಬರು ಹೆರಿಗೆ ರಜೆಯಲ್ಲಿದ್ದವರು, ಆಸ್ಪತ್ರೆಗೆ ಬಂದು ಮಗುವಿಗೆ ಹಾಲುಣಿಸಿದರು. ಇದರಿಂದ ಮಗು ಬದುಕುಳಿಯಿತು.







ಸಂಘದ ಖಜಾಂಚಿಯವರಾದ ಶ್ರೀ ಎ.ಆರ್. ಬಡಿಗೇರ್ ರವರು ಎಲ್ಲರನ್ನೂ ಶಿಬಿರದ ಕಾರ್ಯಕ್ರಮಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಆಗಮಿಸಿದ್ದ ಮುಖ್ಯ ಅತಿಥಿಗಳನ್ನು ಹೂ ಗುಚ್ಛ ನೀಡಿ ಸ್ವಾಗತಿಸಲಾಯಿತು.



ಇಂಥವರನ್ನು ಗುರ್ತಿಸಿ, ಡಿಜಿ ಮತ್ತು ಐಜಿಪಿಯವರಿಂದ ಪ್ರಶಸ್ತಿ ಕೊಡಿಸಿದ್ದೇವೆ, ಇದರಿಂದ ಬಹಳ ಜನರಿಗೆ ಆಶ್ಚರ್ಯ ಎನಿಸಿದೆ. ಇಂತಹ ಸಾಮಾಜಿಕ ಕಳಕಳಿಯ ಕೆಲಸ ಮಾಡುವುದರ ಜೊತೆಗೆ, ಪ್ರತೀ ಪೊಲೀಸ್ ವಸತಿ ಗೃಹಗಳ ಕಾಲೋನಿಯಲ್ಲಿ ನಿಂಬೆ, ನುಗ್ಗೆ, ಕರಿಬೇವಿನ ಗಿಡಗಳನ್ನು ನೆಡಲು, ನಮ್ಮ ಅಧ್ಯಕ್ಷರು ಎಷ್ಟು ಬೇಕು ಅಂತ ತಿಳಿಸಿದರೆ, ಒದಗಿಸಿಕೊಡುತ್ತೇನೆ. ಇದರಿಂದ ಎಲ್ಲ ಸಿಬ್ಬಂದಿಯವರ ಆರೋಗ್ಯ ತನ್ನಿಂತಾನೇ ಸರಿಯಾಗುತ್ತದೆಂದು ತಿಳಿಸಿದರು,



ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಬೆಂಗಳೂರು ನಗರ, ಪಶ್ಚಿಮ ವಿಭಾಗದ ಉಪಪೊಲೀಸ್ ಆಯುಕ್ತರವರ ಅನುಪಸ್ಥಿತಿಯಲ್ಲಿ, ವಿಜಯನಗರ ಉಪ-ವಿಭಾಗದ ಸಹಾಯಕ ಪೊಲೀಸ್ ಆಯುಕ್ತರವರಾದ ಶ್ರೀ ಚಂದನ್ ಕುಮಾರ್‌ರವರು ತಮ್ಮ ಬಿಡುವಿಲ್ಲದ ಕಾರ್ಯದ ನಡುವೆಯೂ ಜನೋಪಯೋಗಿ ಕಾರ್ಯಕ್ರಮಕ್ಕೆ ಆಗಮಿಸಿ, ಈ ಸಂಘವು ನಿಮ್ಮೆಲ್ಲರ ಮಾರ್ಗದರ್ಶನದಲ್ಲಿ ಉತ್ತಮವಾಗಿ ನಡೀತಾ ಇದೆ.



ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ತರಬೇತಿಯಲ್ಲಿದ್ದಾಗ, ಶ್ರೀಯುತ ಜಗದೀಶ್ ರವರು, ಪೊಲೀಸ್ ಇಲಾಖೆಯ ತಮ್ಮ ಅನುಭವವನ್ನು ಮಕ್ಕಳಿಗೆ ಹೇಳಿದ ಹಾಗೆ ಹೇಳಿದ್ದಾರೆ. ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇವೆ. ನಮ್ಮಿಂದ ನಿಮಗೇನಾದರೂ ಸಹಾಯ ಬೇಕಾಗಿದ್ದಲ್ಲಿ, ಯಾವುದೇ ಸಂಕೋಚವಿಲ್ಲದೆ ಕೇಳಬಹುದು. ನಾವು, ನಮ್ಮ ಅಳಿಲ ಸೇವೆಯನ್ನು ಹಿರಿಯರಿಗೆ ಸಲ್ಲಿಸಿ, ಪೂರ್ಣಗೊಳಿಸಲು ಪ್ರಯತ್ನಿಸುತ್ತೇವೆ. ತಮ್ಮ ಹಿರಿತನದ ಮಾರ್ಗದರ್ಶನ, ಈಗಿರುವ ಅಧಿಕಾರಿ ಮಿತ್ರರಿಗೆ ಅವಶ್ಯಕವಾಗಿದೆ.




ನನ್ನನ್ನು ನೀವು ಮಗ ಅಂತ ತಿಳಿದುಕೊಳ್ಳುತ್ತೀರೋ, ಸಹೋದರ ಅಂತ ತಿಳಿದುಕೊಳ್ತೀರೋ, ಏನ್ ಬೇಕಾದರೂ ತಿಳಿದುಕೊಳ್ಳಿ. ನನ್ನಲ್ಲಿ ತಪ್ಪು ಕಂಡಾಗ, ಅದನ್ನು ತಿದ್ದಿ, ತೀಡಿ ಸರಿಪಡಿಸುವಂಥಹ ಕೆಲಸವನ್ನು ಮಾಡುವುದನ್ನು ನಾನು ಸಂಪೂರ್ಣವಾಗಿ ಒಪ್ಪಿ, ಸ್ವಾಗತಿಸುತ್ತೇನೆ.

ಇಂಥಹ ಆರೋಗ್ಯ ಶಿಬಿರವನ್ನು ನಡೆಸುವುದು, ಪೊಲೀಸ್ ಕಾಲೋನಿಗಳಲ್ಲಿ ಗಿಡಗಳನ್ನು ನೆಟ್ಟು ಪ್ರಕೃತಿಯನ್ನು ಬೆಳೆಸುವಂಥಹ ಕಾರ್ಯಕ್ರಮಗಳ ಬಗ್ಗೆ ಹೊಗಳಿಕೆಯ ಮಾತುಗಳನ್ನಾಡಿದರು.



ವಾಸನ್ ಐ ಕೇರ್ ನ ಹಿರಿಯ ವೈದ್ಯಾಧಿಕಾರಿಗಳಾದ ಡಾ|| ಸೌಜನ್ಯ ಕೆ. ರವರು ತಮ್ಮ ಸಂಸ್ಥೆಯ ಸಹಯೋಗದ ಅತಿಥಿ ಭಾಷಣದಲ್ಲಿ, ಪೊಲೀಸ್ ಅಧಿಕಾರಿಗಳು ಯಾವಾಗಲೂ ಕಾರ್ಯದೊತ್ತಡದಿಂದ (ಸ್ಟ್ರೆಸ್) ಇರುವುದರಿಂದ, ಬಿ.ಪಿ., ಶುಗರ್, ಇತ್ಯಾದಿಗಳು ಪ್ರಾರಂಭ ಆಗುತ್ತವೆ. ಇದನ್ನು ಕಡಿಮೆ ಮಾಡಿಕೊಳ್ಳಬೇಕು. ಇದರಿಂದ ಕಣ್ಣಿನ ದೃಷ್ಟಿ ಮೇಲೆ ಪ್ರಭಾವ ಬೀರುತ್ತದೆ. ಆರೋಗ್ಯದ ಬಗ್ಗೆ ಗಮನಹರಿಸಬೇಕೆಂದು ತಿಳಿಸಿದರು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀಯುತ ಕೆ.ಬಿ. ಬೆಟ್ಟೇಗೌಡ ರವರು ಮುಂದಿನ ದಿನಗಳಲ್ಲಿ ಪರಿಸರ ರಕ್ಷಣೆ ಮಾಡಲು ಪೊಲೀಸ್ ವಸತಿ ಗೃಹಗಳ ಕಾಲೋನಿಗಳನ್ನು ಗುರ್ತಿಸಿ, ಸೂಕ್ತ ಸ್ಥಳಗಳಲ್ಲಿ ನಿಂಬೆ, ನುಗ್ಗೆ, ಕರಿಬೇವಿನ ಗಿಡಗಳನ್ನು ನೆಟ್ಟು, ಪೊಲೀಸ್ ಸಿಬ್ಬಂದಿಯವರ ಆರೋಗ್ಯ ವೃದ್ಧಿಯಾಗುವ ಬಗ್ಗೆ ಚಿಂತಿಸಲಾಗುವುದೆಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು,







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾದ, ಶ್ರೀಯುತ ಹೆಚ್. ಸುಬ್ಬಣ್ಣ ರವರು, ಕಾರ್ಯಕ್ರಮದ ಸಹಯೋಗ ನೀಡಿದ ವಾಸನ್ ಐ ಕೇರ್ ಹಾಗೂ ಅವರ ಜೊತೆ ಸಹಕರಿಸಿದ ಫೋರ್ಟಿಸ್, ಕ್ಲವ್, ಆನ್ವಿ, ಬ್ಲಡ್ ಡೊನೇಷನ್ ಕ್ಯಾಂಪ್ ಗೆ ಆಗಮಿಸಿದ್ದ ಹಿರಿಯ ಸದಸ್ಯರೂ ಸೇರಿದಂತೆ ಎಲ್ಲ ಸದಸ್ಯರು ಹಾಗೂ ಸರ್ವರಿಗೂ ಹೃತ್ಪೂರ್ವಕವಾಗಿ ವಂದನಾರ್ಪಣೆ ಸಲ್ಲಿಸಿದರು.

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ನಿಕಟ ಪೂರ್ವ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ. ಎ. ಕೆ. ತಿಮ್ಮಯ್ಯರವರು ಪ್ರತೀ ಮಾತುಗಾರರ ನಂತರ, ಅವರು ಆಡಿದ ಮಾತುಗಳ ಸಂಕ್ಷಿಪ್ತ ರೂಪಗಳನ್ನು ಪ್ರಸ್ತುತ ಪಡಿಸುತ್ತಾ, ತಮ್ಮ ನಿರರ್ಗಳ ಮಾತುಗಳ ನಿರೂಪಣೆಯಿಂದ ಕಾರ್ಯಕ್ರಮಕ್ಕೆ ಶೋಭೆ ತಂದರು.







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಜಯನಗರದ ವಾಸನ್ ಐ ಕೇರ್ ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಕಾರ್ಯಗಳನ್ನು ಮಾಡುತ್ತಿರುವ ಕೆಲವು ಫೋಟೋಗಳು.







**ಸಂಘವು ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ಹಿರಿಯ/ಕಿರಿಯ ಸದಸ್ಯರು, ಸೇವಾ ನಿರತ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಇನ್ನಿತರರು ಆಗಮಿಸಿ ಶಿಬಿರಕ್ಕೆ ಶೋಭೆ ತಂದು ಯಶಸ್ವಿಯಾಗಲು ಸಹಕರಿಸಿದರು.**



















ಸಂಘದ  ವತಿಯಿಂದ ವೈದ್ಯಕೀಯ ಅಧಿಕಾರಿಗಳು ಹಾಗೂ ಸಹಾಯಕರುಗಳಿಗೆ ಚಹಾ, ಬಿಸ್ಕತ್ ಹಾಗೂ ಲಘು ಭೋಜನ ವ್ಯವಸ್ಥೆ ಮಾಡಲಾಗಿತ್ತು.





ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ವಾಸನ್ ಐ ಕೇರ್ ರವರ ಸಹಯೋಗದಲ್ಲಿ ಆಯೋಜಿಸಿದ್ದ ಆರೋಗ್ಯ, ಕಣ್ಣಿನ ತಪಾಸಣಾ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.

NAMASTE

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

* * * * *